**<u>ದಿನಾಂಕಃ 04.06.2026</u>** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ ಬಿ ಎ ಬಿ ವಕೀಲರಿಂದ ಆರೋಪಿತರ ಪರ</u>**

18. ಬಂಟ್ವಾಳ ತಾಲೂಕು ಮೆರಮಜಲು ಗ್ರಾಮದ ಸರ್ವೆ ನಂಬ್ರ 107/14ಹೆಚ್ ನನ್ನ ತಾಯಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ನನ್ನ ತಾಯಿಗೆ ನಾಲ್ಕು ಜನ ಮಕ್ಕಳು. ನಾನು ಸರ್ವೆ ನಂಬ್ರ ತಿದ್ದುಪಡಿಗಾಗಿ ಬಂಟ್ವಾಳ ತಹಶೀಲ್ದಾರ್ ಕಚೇರಿಯಲ್ಲಿ ಅರ್ಜಿಯನ್ನು 2018ರಲ್ಲಿ ಕೊಟ್ಟಿದ್ದೆ. ನಾನು ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಆರೋಪಿಯು ಬಂಟ್ವಾಳ ತಾಲೂಕು ಕಚೇರಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ. ನಾನು ತಿದ್ದುಪಡಿ ಮಾಡಿದ ಪಹಣಿ ಪತ್ರಿಕೆಯನ್ನು 2020ರಲ್ಲಿ ಪಡೆದುಕೊಂಡಿದ್ದು ಆ ಸಮಯದಲ್ಲಿ ಬಂಟ್ವಾಳ ತಾಲೂಕು ಕಚೇರಿಯ ಯಾವುದೇ ಅಧಿಕಾರಿಗಳಿಗಾಗಲೀ ಅಥವಾ ಸಿಬ್ಬಂದಿಗಳಿಗಾಗಲೀ ಹಣವನ್ನು ಕೊಟ್ಟಿರಲಿಲ್ಲ. ನಾನು ಸರ್ವೆ ನಂಬ್ರ ತಿದ್ದುಪಡಿಗೆ ನೀಡಿದ ಅರ್ಜಿ ಏನಾಯಿತು ಎಂದು ಗ್ರಾಮ ಕರಣಿಕರ ಬಳಿ ಕೇಳುತ್ತಿದ್ದೆ. ಆರೋಪಿಯು ಬಂಟ್ವಾಳ ತಾಲೂಕು ಕಚೇರಿಗೆ ಕೆಲಸಕ್ಕೆ ಬಂದಿರುವುದು ನಾನು ನಿಪಿ-1 ರಂತೆ ದೂರು ಕೊಡುವ ಎರಡು ದಿನ ಮೊದಲು ಎಂದರೆ ಸರಿ. ನಾನು ಸರ್ವೆ ನಂಬ್ರ ತಿದ್ದುಪಡಿಗೆ ನೀಡಿದ ಅರ್ಜಿಯ ಕಡತ ತಾಲೂಕು ಕಚೇರಿಯಲ್ಲಿ ಯಾವ ವಿಭಾಗ ಮತ್ತು ಯಾರ ಬಳಿ ಇತ್ತು ಎಂಬುದು ನನಗೆ ಗೊತ್ತಿಲ್ಲ. ಆರೋಪಿಯು ನನ್ನನ್ನು ತಾಲೂಕು ಕಚೇರಿಗೆ ಅಡ್ಡಾಡಿಸಿರಲಿಲ್ಲ ಮತ್ತು ನನ್ನ ಕೆಲಸಕ್ಕೆ ಯಾವುದೇ ವಿಳಂಭವನ್ನು ಮಾಡಿರಲಿಲ್ಲ ಎಂದರೆ ಸರಿ.

19. ನಾನು ನೀಡಿದ ಅರ್ಜಿಯು ತಹಶೀಲ್ದಾರ್ ಕಚೇರಿಯಲ್ಲಿ ಆದೇಶವಾಗಿ ಅದು ಕಂದಾಯ ನೀರಿಕ್ಷಕರವರಿಗೆ ಬಂದಿದ್ದು ಅವರಲ್ಲಿ ಸುಮಾರು ಒಂದು ವರ್ಷ ಹಾಗೆಯೇ ಬಾಕಿ ಇತ್ತು. ಆ ರೀತಿ ಅವರು ವಿಳಂಬ ಮಾಡಿದ್ದರಿಂದ ನನಗೆ ಬೇಸರವಾಗಿತ್ತು ಎಂದರೆ ಸರಿ. ನನ್ನ ಅರ್ಜಿಯನ್ನು ಇತ್ಯರ್ಥ ಪಡಿಸಿ ತಿದ್ದುಪಡಿ ಪಹಣಿ ಪತ್ರಿಕೆಯನ್ನು ನೀಡಲು ಎರಡು ವರ್ಷ ವಿಳಂಭವಾದ್ದರಿಂದ ನಾನು ಲೋಕಾಯುಕ್ತ ಕಚೇರಿಯಲ್ಲಿ ದೂರನ್ನು ನೀಡಲು ತಿರ್ಮಾನಿಸಿದ್ದೆ.

20. ನನಗೆ ತಿಳಿದಂತೆ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯು ಬಂಟ್ವಾಳ ತಾಲೂಕು ಕಚೇರಿಯಲ್ಲಿ ಕರ್ತವ್ಯಕ್ಕೆ ಸೇರಿದ ಒಂದು ವಾರದಲ್ಲಿ ನನಗೆ ತಿದ್ದುಪಡಿ ಮಾಡಿದ ಪಹಣಿ ಪತ್ರಿಕೆ ಸಿಕ್ಕಿತ್ತು. ಆರೋಪಿಯು ನನ್ನ ಅರ್ಜಿಯನ್ನು ಯಾವುದೇ ರೀತಿಯಲ್ಲಿ ಬಾಕಿ ಇರುವಂತೆ ಮಾಡಿರಲಿಲ್ಲ ಎಂದರೆ ಸರಿ. ಆರೋಪಿಯು ನನ್ನ ಬಳಿ ಹಣ ಕೊಡದಿದ್ದರೆ ಪಹಣಿ ಪತ್ರಿಕೆಯನ್ನು ಮಾಡಿಕೊಡುವುದಿಲ್ಲ ಎಂದು ಹೇಳಿರಲಿಲ್ಲ ಎಂದರೆ ಸರಿ. ಆರೋಪಿಯು ನನ್ನ ಬಳಿ ಕೆಲಸವಾಗಬೇಕಾದರೆ ಹಣವನ್ನು ಕೊಡುವಂತೆ ಕೇಳಿರಲಿಲ್ಲ.

21. ನಾನು ಮೊದಲು ಟಿಂಬರ್ ಸರ್ವೆಯರ್ ಆಗಿ ಕೆಲಸ ಮಾಡುತ್ತಿದ್ದೆ. ಆದುದ್ದರಿಂದ ನನಗೆ ಲೋಕಾಯುಕ್ತದ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿ. ನಿಪಿ-1 ದೂರನ್ನು ತಾಲೂಕು ಕಚೇರಿಯ ಆವರಣದಲ್ಲಿಯೇ ಬರೆಯಿಸಲಾಗಿತ್ತು. ತನಿಖಾಧಿಕಾರಿಯವರು ಮಹಜರು ಮಾಡುವ ಸಮಯದಲ್ಲಿ ವಿಡಿಯೋಗ್ರಾಫಿ ಮಾಡಿದ್ದರು. ನಿಪಿ-1 ರಂತೆ ನಾನು ದೂರು ಕೊಡುವ ಮೊದಲೇ ನನ್ನ ಅರ್ಜಿಗೆ ಸಂಬಂಧಿಸಿದ ಕಡತವು ಡೆಪ್ಯುಟಿ ತಹಶೀಲ್ದಾರ್ ರಿಂದ ಸಹಿ ಆಗಿ ಟಪಲ್ ವಿಭಾಗಕ್ಕೆ ಹೋಗಿತ್ತು. ನಾನು ದೂರು ಕೊಡುವ ಮೊದಲೇ ನನ್ನ ಕೆಲಸ ಆಗಿತ್ತು ಎಂದರೆ ಸಾಕ್ಷಿ ಹೇಳುತ್ತಾರೆ ಕೆಲಸ ಆಗಿತ್ತು ಆದರೇ ಕಡತವು ಆರೋಪಿಯ ಕ್ಯಾಬಿನಲ್ಲಿಯೇ ಇತ್ತು ಎಂದು.

22. ಚಾಸಾ-12 ರಾಜೇಶ್ ರವರು ಚುನಾವಣಾ ವಿಭಾಗದ ಉಪ ತಹಶೀಲ್ದಾರ್ ಆಗಿದ್ದರು. ತನಿಖಾಧಿಕಾರಿಯವರು ನಿಪಿ-6 ರಂತೆ ಹಾಜರುಪಡಿಸಿದ ಕಡತವನ್ನು ಆರೋಪಿಯಿಂದಲೇ ಸ್ವಾಧೀನಪಡಿಸಿಕೊಂಡಿದ್ದರು. ನಿಪಿ-6 ರಂತೆ ಕಡತವನ್ನು ಆರೋಪಿಯಿಂದ ಸ್ವಾಧೀನಪಡಿಸಿಕೊಂಡಿರಲಿಲ್ಲ ಮತ್ತು ಅದನ್ನು ಬೇರೆಯವರಿಂದ ತನಿಖಾಧಿಕಾರಿಯವರು ತರಿಸಿಕೊಂಡಿದ್ದರು ಎಂದರೆ ಸರಿಯಲ್ಲ.

23. ದಿನಾಂಕ 24.11.2020 ರಂದು ನನಗೆ ತನಿಖಾಧಿಕಾರಿಯವರು voice recorder ಅನ್ನು ಕೊಟ್ಟಿದ್ದರು. ಅದು ಒಂದು ದಿನ ಮಾತ್ರ ನನ್ನ ಬಳಿ ಇತ್ತು. ನಾನು ಆರೋಪಿಯೊಂದಿಗೆ ಯಾವತ್ತೂ ಸಹ ಮೊಬೈಲ್ ನಲ್ಲಿ ಮಾತನಾಡಿಲ್ಲ. ನಾನು ಆರೋಪಿಯೊಂದಿಗೆ ಮೊದಲು ಮಾತನಾಡಿದ್ದರಿಂದ ನನಗೆ ಆರೋಪಿಯ ಧ್ವನಿಯು ತಿಳಿದಿತ್ತು.

24. ಆರೋಪಿಗೆ ಸೇರಿದ ಕ್ಯಾಬೀನ್ ನಲ್ಲಿ ಅವರ ಇನ್ನೊಬ್ಬ ಸಿಬ್ಬಂದಿ ಇರುತ್ತಾರೆ. ನಾನು ಹಣ ಕೊಟ್ಟಿದ್ದೇನೆಂದು ಹೇಳುವ ದಿನ ಆರೋಪಿಯು ಕಚೇರಿಯಲ್ಲಿ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಸ್ವ ಇಚ್ಛೆಯಿಂದ ಹೇಳುತ್ತಾರೆ ನಂತರ ಅವರು ಬಂದಿದ್ದರು ಎಂದು. ಆರೋಪಿಗೆ ನೀಡಿದ್ದೆನೆಂದು ಹೇಳುವ ಒಂದು ಸಾವಿರ ರೂಪಾಯಿ ನನ್ನ ಬಳಿಯೇ ಇತ್ತು. ಆರೋಪಿಯು ನನಗೆ ಫೋನ್ ಮೂಲಕ ಹಣ ಕೊಡುವಂತೆ ಕೇಳಿರಲಿಲ್ಲ.

25. ದಿನಾಂಕ 26.11.2020ಕ್ಕಿಂತ ಮೊದಲೇ ನನ್ನ ಅರ್ಜಿಗೆ ಸಂಬಂಧಿಸಿದ ಕೆಲಸ ಮುಗಿದಿತ್ತು ಎಂದರೆ ಸರಿ. ಸರ್ವೆ ನಂಬ್ರ ತಿದ್ದುಪಡಿ ಆದೇಶವನ್ನು ತಹಶೀಲ್ದಾರರು ಮಾಡುತ್ತಾರೆ ಎಂದರೆ ಸರಿ. ಆರೋಪಿಯು ನನ್ನ ಕೆಲಸಕ್ಕೆ ಹಣವನ್ನು ಕೊಡುವಂತೆ ಡಿಮ್ಯಾಂಡ್ ಮಾಡಿರಲಿಲ್ಲ ಎಂದರೆ ಸರಿ. ಆರೋಪಿಯು ಕೆಲಸ ಮಾಡುವ ಸ್ಥಳವು ತಾಲೂಕು ಕಚೇರಿಯ ಮೊದಲಿನ ಮಹಡಿಯಲ್ಲಿ ಇತ್ತು. ಸದರಿ ಮೊದಲಿನ ಮಹಡಿಯಲ್ಲಿ ಆರೋಪಿಯದ್ದಲ್ಲದೇ ಬೇರೆ ಅಧಿಕಾರಿಗಳ ಚೆಂಬರ್ ಸಹ ಇತ್ತು ಎಂದರೆ ಸರಿ.

26. ಟ್ರ್ಯಾಪ್ ಮಾಡಿದ ಸಮಯದಲ್ಲಿ ಲೋಕಾಯುಕ್ತ ಠಾಣೆಯ ಅಧಿಕಾರಿಗಳು ನೆಲಮಹಡಿಯಲ್ಲಿದ್ದರು. ಟ್ರ್ಯಾಪ್ ಸಮಯದಲ್ಲಿ ನಾನೊಬ್ಬನೇ ಆರೋಪಿಯ ಚೆಂಬರ್ ಗೆ ಹೋಗಿದ್ದೆ. ನಾನು ನಂತರ ಆರೋಪಿಯ ಚೆಂಬರ್ ನಿಂದ ಹೊರಗೆ ಬಂದು ಲೋಕಾಯುಕ್ತ ಅಧಿಕಾರಿಗಳನ್ನು ಕರೆದಿದ್ದೆ ಎಂದರೆ ಸರಿ. ನಾನು ಹೋದಾಗ ಆರೋಪಿಯು ಅವರ ಚೆಂಬರ್ ನಲ್ಲಿ ಇರಲಿಲ್ಲ. ನಾನು ಆರೋಪಿಯ ಚೆಂಬರ್ ಗೆ ಹೋಗಿ ಹೊರಗೆ ಬರುವಾಗ ಆರೋಪಿಯು ಚೆಂಬರ್ ಗೆ ಬಂದಿದ್ದರು. ನಾನು ಸಹ ಪುನಹಃ ಆರೋಪಿಯೊಂದಿಗೆ ಅವರ ಚೆಂಬರ್ ಗೆ ಹೋಗಿದ್ದೆ. ನಾನು ಸುಮಾರು 10 ನಿಮಿಷಗಳ ಕಾಲ ಆರೋಪಿಯೊಂದಿಗೆ ಆರೋಪಿಯ ಚೆಂಬರ್ ನಲ್ಲಿದ್ದೆ. ನಾನು ಆರೋಪಿಯೊಂದಿಗೆ ಚೆಂಬರ್ ನೊಳಗೆ ಹೋದಾಗ ಅಲ್ಲಿ ಬೇರೆ ಸಿಬ್ಬಂದಿಗಳು ಸಹ ಇದ್ದರು. ನನಗೂ ಮತ್ತು ಆರೋಪಿಗೂ ನಡುವೆ ಆ ಸಮಯದಲ್ಲಿ ಏನು ಮಾತುಕತೆ ಆಯಿತು ಎಂಬುದು ಅಲ್ಲಿದ್ದ ಬೇರೆ ಸಿಬ್ಬಂದಿಗಳಿಗೆ ಗೊತ್ತಾಗಿರಲಿಲ್ಲ. ನನ್ನ ಪ್ರಕಾರ ನನಗೂ ಮತ್ತು ಆರೋಪಿಗೂ ಬಿಟ್ಟರೆ ಬೇರೆ ಯಾರಿಗೂ ಆರೋಪಿಯ ಚೆಂಬರ್ ನಲ್ಲಿ ಏನಾಯಿತು ಎಂಬುದು

ತಿಳಿದಿಲ್ಲ. ನಾನು ಸರ್ಕಾರಿ ಅಭಿಯೋಜಕರ ಪಾಟೀ ಸವಾಲಿನಲ್ಲಿ ಈಗ ಓದಿ ಹೇಳಿದಂತೆ ಪ್ಯಾರ 7 ರಿಂದ 17 ರವರೆಗೆ ಹೇಳಿದಂತಹ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

27. ನನಗೆ ಕಂದಾಯ ನಿರೀಕ್ಷಕರು ತೊಂದರೆ ನೀಡಿ ವಿಳಂಬ ಮಾಡಿದ್ದರಿಂದ ನಾನು ಲೋಕಾಯುಕ್ತ ಪೋಲಿಸರಿಗೆ ದೂರು ಕೊಟ್ಟಿದ್ದೆ ಎಂದರೆ ಸರಿ. ದೂರು ಕೊಡುವವರೆಗೆ ನನಗೆ ನನ್ನ ಅರ್ಜಿಯು ಯಾವ ಹಂತದಲ್ಲಿದೆ ಎಂಬುದು ನನಗೆ ಗೊತ್ತಿರಲಿಲ್ಲ ಎಂದರೆ ಸರಿ. ಆರೋಪಿಯು ನನಗೆ ಸತಾಯಿಸಿದಿಲ್ಲ ಮತ್ತು ನನ್ನ ಕೆಲಸವನ್ನು ವಿಳಂಬ ಮಾಡಿಲ್ಲ ಎಂದರೆ ಸರಿ. ನಾನು ಹೇಳಿದಂತೆ ಯಾವುದೇ ಟ್ರ್ಯಾಪ್ proceeding ಅನ್ನು ಆರೋಪಿಯ ಕಚೇರಿಯಲ್ಲಿ ಮಾಡದಿದ್ದು ಅದೆಲ್ಲವನ್ನು ಲೋಕಾಯುಕ್ತ ಪೋಲಿಸ್ ಠಾಣೆಯಲ್ಲಿಯೇ ತಯಾರಿಸಲಾಗಿದೆ ಎಂದರೆ ಸಾಕ್ಷಿ ಹೇಳುತ್ತಾರೆ ನನಗೀಗ ನೆನಪಿಗೆ ಬರುತ್ತಿಲ್ಲ. ನಿಪಿ-3 ಹಾಗೂ ನಿಪಿ-8 ಅನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಲೋಕಾಯುಕ್ತ ಪೋಲಿಸರು ಹೇಳಿದಂತೆ ದೂರು ನೀಡಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.